ಅರೇ ಅಂಗಡಿ ಸಾಲಕೊಡ–ದೊಡ್ಡ ಮನೆ ರಸ್ತೆ ನಿರ್ಮಾಣ

೭೧೮ ಶ್ರೀ ರಾಮನಾರಾಯಣ ನಾಯಕ್ (ಬಟ್ಕಳ್).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊನ್ನಾವರ ತಾಲ್ಲೂಕಿನ ಅರೇ ಅಂಗಡಿ–ಸಾಲಕೋಡ–ದೊಡ್ಡ ಮನೆ ರಸ್ತೆ ನಿರ್ಮಿಸಲು ಸರಕಾರದವರು ಯಾವ ವರ್ಷ ಉದ್ದೇಶಿದ್ದರು ಮತ್ತು ಆಗಿನ ಅಂದಾಜು ವೆಚ್ಚವೆಷ್ಟೆಂದು ನಿರ್ಧರಿಸಲಾಗಿತ್ತು ?

ಆ) ಈಗ ರಸ್ತೆ ನಿರ್ಮಿಸಿ ಮುಗಿಸುವುದಾದಲ್ಲಿ ಎಷ್ಟು ಹಣ ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ, (ಎಷ್ಟು ಕಿಲೋಮೀಟರ್ ಉದ್ದ ರಸ್ತೆ ನಿರ್ಮಾಣವಾಗುವುದು ಬಾಕಿ ಇದೆ)?

ಇ) ಸದರಿ ಕೆಲಸವನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಸದರಿ ರಸ್ತೆಯ ಒಟ್ಟು ಉದ್ದ ೩೭.೬೨ ಕಿ.ಮಿ. ಇದರಲ್ಲಿ ಹೊನ್ನಾವರ ತಾಲ್ಲೂಕಿನಲ್ಲಿ ೨೭.೮೭ ಕಿ.ಮಿ. ಮತ್ತು ಸಿದ್ದಾಪುರ ತಾಲ್ಲೂಕಿನಲ್ಲಿ ೯.೭೫ ಕಿ ಮಿ. ಇದೆ. ಹೊನ್ನಾವರ ತಾಲ್ಲೂಕಿನಲ್ಲಿ ಬರುವ ರಸ್ತೆಯ ಭಾಗದಲ್ಲಿ ೬.೪ ಕಿ.ಮಿ. ಉದ್ದವನ್ನು ಅಭಿವೃದ್ಧಿ ಮಾಡಲು ೧೯೭೦–೭೧ರಲ್ಲಿ ೬.೮೬ ಲಕ್ಷ ರೂಪಾಯಿಗಳಿಗೆ ಅಂದಾಜನ್ನು ಮಂಜೂರು ಮಾಡಲಾಯಿತು.

ಆ) ಹೊನ್ನಾವರ ತಾಲ್ಲೂಕಿನಲ್ಲಿ ಇರುವ ಭಾಗದಲ್ಲಿ ೧೧.೮೭ ಕಿ.ಮಿ. ಉದ್ದದ ರಸ್ತೆಯನ್ನು ಅಭಿವೃದ್ಧಿ ಮಾಡಲು ೪೧ ಮೋರಿಗಳನ್ನು ಮತ್ತು ೩ ಸೇತುವೆಗಳನ್ನು ನಿರ್ಮಾಣ ಮಾಡಲು ಸುಮಾರು ೧೦೦ ಲಕ್ಷ ರೂಪಾಯಿಂಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

ಇ) ಆರ್ಥಿಕ ಲಭ್ಯತೆಯನ್ನಾಧರಿಸಿ, ಇದನ್ನು ಪರಿಶೀಲಿಸಲಾಗುವುದು.

ವೈಸೂರಿನ ವಾಣಿವಿಲಾಸ ಮಾರ್ಕೆಟ್ ವೃತ್ತದಿಂದ ರೇಸ್‌ಕೋರ್ಸ್ ವೃತ್ತಕ್ಕೆ ರಸ್ತೆ ನಿರ್ಮಾಣ ಮಾಡುವ ಬಗ್ಗೆ

೯೦೭ ವೇದಾಂತ ಹೆಬ್ಬಿಗೆ (ಕೃಷ್ಣರಾಜ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿ.ವಿ. ಮಾರ್ಕೆಟ್ ವೃತ್ತದಿಂದ ರೇಸ್‌ಕೋರ್ಸ್ ರಸ್ತೆವರೆಗೆ ರಸ್ತೆ ನಿರ್ಮಿಸುವ ಯೋಜನೆಯು ಯಾವಾಗ ತಯಾರಿಸಲಾಯಿತು ?

ಆ) ಯೋಜನೆಯ ಅಂದಾಜು ವೆಚ್ಚವೇನು ?

ಇ) ಯೋಜನೆಯು ಯಾವ ಹಂತದವರೆಗೆ ಮುಗಿದಿರುತ್ತದೆ ಮತ್ತು ಇದುವರೆಗೂ ಖರ್ಚಾಗಿರುವ ಹಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ವಿ.ವಿ. ಮಾರ್ಕೆಟ್ ವೃತ್ತದಿಂದ ರಸ್ತೆ ನಿರ್ಮಿಸಲು ಯಾವ ಯೋಜನೆಯೂ ಇರುವುದಿಲ್ಲ. ಆದರೆ ರೇಸ್‌ಕೋರ್ಸ್ ವೃತ್ತದಿಂದ ಪೂರ್ಣಯ್ಯ ಛತ್ರದವರೆಗೆ ರಸ್ತೆ ನಿರ್ಮಿಸಲು ಯೋಜನೆ ಇದ್ದು ಈ ಯೋಜನೆಯನ್ನು ಕೈಗೊಳ್ಳಬೇಕೆಂದು ೧೯೭೦ಕ್ಕಿಂತ ಹಿಂದೆಯೇ ಯೋಜಿಸಲಾಗಿತ್ತು.

ಆ) ರೂ. ೧.೪೪,೦೦೦-೦೦ ಗಳು.

ಇ) ಬೆಂಗಳೂರು-ನೀಲಗಿರಿ ರಸ್ತೆಯಲ್ಲಿ ಬರುವ ಸೇತುವೆ ನಿರ್ಮಾಣವನ್ನು ಬಿಟ್ಟು ಉಳಿದೆಲ್ಲಾ ರಸ್ತೆ ಕೆಲಸಗಳು ಮತ್ತು ಕ್ರಾಸ್ ಡ್ರೈನೇಜ್ ಕೆಲಸಗಳನ್ನು ಮುಗಿಸಿರುತ್ತದೆ. ಇಲ್ಲಿಯವರೆಗೆ ತನಕ ಒಟ್ಟು ಖರ್ಚಾಗಿರುವ ಹಣ ರೂ. ೧೦,೪೩,೬೨೨-೦೦.